



ವಿಶೇಷತೆಯೆಂದರೆ ಸಾಂಪ್ರದಾಯಿಕ ಉಡುಗೆಗೆ ಆಧುನಿಕ ಬಣ್ಣಗಳ ಸಂಯೋಜನೆ. ಅದರಲ್ಲೂ ಮಣ್ಣಿನ ಪಾಸ್ಟೆಲ್ ಬಣ್ಣಗಳು (colour pattern), ಕಣ್ಸೆಳೆಯುವ ಹೂವಿನ ವಿನ್ಯಾಸಗಳು ಉಡುಪಿನ ಸೊಬಗನ್ನು ಹೆಚ್ಚಿಸಿವೆ.

ಈ ಕಲೆಯಲ್ಲಿ ಸೂಜಿದಾರದ ನೆರವಿನಿಂದ ಅತಿ ನುಣುಪಾದ ನೂಲಿನ ಎಳೆಗಳ ಉಡುಗೆಯ ಮೇಲೆ ವಿಭಿನ್ನ ವಿನ್ಯಾಸ ಬಿಡಿಸಲಾಗುತ್ತದೆ. ಇದನ್ನು ಶೇ. 95ರಷ್ಟು ಮಹಿಳೆಯರೇ ರೂಪಿಸುವುದು ವಿಶೇಷ. ಇದರ ನೆರವಿನಿಂದ ಸೀರೆ, ಸಲ್ವಾರ್ ಸೂಟ್, ಕುರ್ತಾ, ಟೋಪಿ ಮುಂತಾದ ಉಡುಗೆಗಳು ಸುಂದರವಾಗಿ ರೂಪುಗೊಳ್ಳುತ್ತದೆ. ಬದಲಾಗುತ್ತಿರುವ ಫ್ಯಾಷನ್‌ಗೆ ತಕ್ಕಂತೆ ಕೈಗಳಿಗೆ ಬದಲಾಗಿ ಯಂತ್ರಗಳ ನೆರವಿನಿಂದಲೂ ಕಸೂತಿ ಈಗೀಗ ರೂಪುಗೊಳ್ಳುತ್ತದೆ. ಆದರೆ ಕಸೂತಿಯ ನಿಜವಾದ ಲುಕ್ ಇರುವುದು ಕೈಗಳಿಂದಲೇ ವಿನ್ಯಾಸಗೊಳಿಸಿದಾಗ ಎಂಬುದು ಸರ್ವವಿದಿತ.

## ಸುದೀರ್ಘ ಇತಿಹಾಸ

ಚಿಕನ್‌ಕಾರಿ ಕಲೆ ಮೊಘಲರ ಕಾಲದಿಂದಲೇ ಲಖನೌದಲ್ಲಿ ಮೊದಲ ಬಾರಿ ವಿಕಾಸಗೊಂಡಿತು. ಮುಂದೆ ಆಂಗ್ಲರ ಕಾಲದಲ್ಲಿ ಇದು ಇನ್ನಷ್ಟು ಎತ್ತರಕ್ಕೇರಿತು. ಮುಂದೆ ಈ ಕಲೆ ಯೂರೋಪ್ ಹಾಗೂ ಇತರ ಖಂಡಗಳನ್ನೂ ತಲುಪಿತು. ಭಾರತದಲ್ಲಿ ಬಾಲಿವುಡ್ ಮೂಲಕ ಫ್ಯಾಷನ್ ಜನಸಾಮಾನ್ಯರನ್ನೂ ತಲುಪಿದೆ. ಮೊಘಲ್ ಸಾಮ್ರಾಜ್ಯದ ಜಹಾಂಗೀರ್‌ನ ಮಹಾರಾಣಿ ನೂರ್‌ಜಹಾನ್ ಅವರಿಗೆ ಚಿಕನ್‌ಕಾರಿ ಕಸೂತಿ ಬಲು ಅಚ್ಚುಮೆಚ್ಚು. ಮಹಾರಾಣಿ ಇದನ್ನು ಇರಾನಿನಿಂದ ಕಲಿತು ಬಂದಿದ್ದರು ಎನ್ನುತ್ತದೆ ಇತಿಹಾಸ. ಮೊಘಲರ ಕಾಲದ ಆಡಳಿತದಲ್ಲಿ, ಗೋಡೆಗಳ ಮೇಲೆ ಬಿಡಿಸಲಾಗಿದ್ದ ಚಿತ್ತಾರಗಳಲ್ಲೂ ಚಿಕನ್‌ಕಾರಿಯೇ ಮೇಲ್ಪಂಕ್ತಿ ಹಾಕಿತ್ತು.

## ಆರಾಮದಾಯಕ

ಚಿಕನ್‌ಕಾರಿ ಸೀರೆಯನ್ನು ಉಟ್ಟರೆ ಅದು ಬಹಳ ಆರಾಮದಾಯಕ. ಈ ಸೀರೆಯ ಪ್ರಮುಖ ಪ್ಲಸ್ ಪಾಯಿಂಟ್ ಎಲ್ಲ ಕಾಲಕ್ಕೂ ಸೂಕ್ತವೆನಿಸುವುದು. ಬೇಸಿಗೆಯಲ್ಲಿ ತಂಪನೆಯ ಹಾಗೂ ಚಳಿಗಾಲದಲ್ಲಿ ಬೆಚ್ಚನೆಯ ಅನುಭವವನ್ನು ಈ ಸೀರೆ ನೀಡುತ್ತದೆ. ಅಲ್ಲದೆ ಪ್ರಯಾಣದ ಸಂದರ್ಭದಲ್ಲಿ ತೊಟ್ಟುಕೊಳ್ಳಲೂ ಅನುಕೂಲಕರವಾಗಿದೆ. 'ಚಿಕನ್‌ಕಾರಿ ಉಡುಗೆಯ ಕುರ್ತಿ ಸೂಟ್ ಮತ್ತು ಲೆಹೆಂಗಾ ಕೂಡ ಈಗ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ವಿಭಿನ್ನ ಲುಕ್ ನೀಡುವ ಈ ಉಡುಗೆಯಲ್ಲಿ ವಿವಿಧ ರಾಜ್ಯಗಳಲ್ಲಿ ಬಳಕೆಯಲ್ಲಿರುವ ಹ್ಯಾಂಡ್ ಬ್ಲಾಕ್ ಪ್ರಿಂಟ್‌ಗಳನ್ನು ನೋಡಬಹುದು. ಆಂಧ್ರದಿಂದ ಕಲಂಕಾರಿ, ಕಚ್‌ನಿಂದ ಅಜ್ರಾಖ್, ಡೆಸ್ಸಾ, ಅಹಮದಾಬಾದ್‌ನಿಂದ ತರಕಾರಿ ಪ್ರಿಂಟ್‌ಗಳು, ಸೌದಾಗರಿ ಪ್ರಿಂಟ್‌ಗಳು, ರಾಜಸ್ಥಾನದಿಂದ ಸಂಗನೇರಿ ಬ್ಲಾಕ್ ಪ್ರಿಂಟ್, ಮಧ್ಯಪ್ರದೇಶದಿಂದ ಬಾಗ್ ಇತ್ಯಾದಿ ಹ್ಯಾಂಡ್ ಪ್ರಿಂಟ್‌ಗಳನ್ನು ಬಳಸಿ ಚಿಕನ್‌ಕಾರಿ ಉಡುಗೆಗಳನ್ನು ವಿನ್ಯಾಸಗೊಳಿಸಬಹುದು' ಎನ್ನುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಫ್ಯಾಷನ್ ಡಿಸೈನರ್ ಸುಷ್ಮಿತಾ ಶೆಟ್ಟಿ.

ಉಡುಗೆಯಲ್ಲಿ ಎಷ್ಟೇ ವೈವಿಧ್ಯವಿದ್ದರೂ, ಹೊಸತನವನ್ನು ನಿರೂಪಿಸುವ ಆಕರ್ಷಕ ಚಿಕನ್‌ಕಾರಿ ಉಡುಗೆ ಮಹಿಳೆಯರ ಮೆಚ್ಚು ಎಂದೇ ಹೇಳಬಹುದು.